**<u>ದಿನಾಂಕಃ 08.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.</u>**

ಅರ್ಜಿದಾರರ ಕಂಪನಿಗೆ ಕೆಲಸಕ್ಕೆ ಸೇರಿ ಒಂದು ವರ್ಷವಾಗಿರುತ್ತದೆ. ಪ್ರಸ್ತುತ ಅರ್ಜಿಯಲ್ಲಿ ಕಂಪನಿಯನ್ನು ಪ್ರತಿನಿಧಿಸಲು ಅಧಿಕಾರ ನೀಡಿದ್ದು, ಸದರಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಎಂವಿಸಿ 6628/2010ರ ಆದೇಶದ ಪುಟವನ್ನು ನಾನು ನೋಡಿರುವುದಿಲ್ಲ. ಅರ್ಜಿಯನ್ನು ದಾಖಲಿಸಿದ ಸಂದರ್ಭದಲ್ಲಿ ಇದ್ದಂತಹ ಅಧಿಕಾರಿ ಪರಿಹಾರ ಅರ್ಜಿಯ ಆದೇಶದ ಪುಟವನ್ನು ನೋಡಿದ್ದಾರೋ, ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಎಂವಿಸಿ 6628/2010ರ ಆದೇಶದ ಪುಟವನ್ನು ನಾನು ನೊಡಿಲ್ಲ ಮತ್ತು ನೋಡಲು ತೊಂದರೆ ಇರಲಿಲ್ಲ. ನ್ಯಾಯಾಲಯದಿಂದ ಬಂದಂತಹ ಸಮನ್ಸ್ ಹಾಗೂ ನೋಟೀಸುಗಳಿಗೆ ಸಂಬಂಧಿಸಿದಂತೆ ಕಂಪನಿಯಲ್ಲಿ ವಹಿಯನ್ನು ನಿರ್ವಹಣೆ ಮಾಡುತ್ತೇವೆ. ಪರಿಹಾರ ಅರ್ಜಿಗೆ ಸಂಬಂಧಪಟ್ಟಂತೆ ನೋಟೀಸು ಜಾರಿಯಾಗಿದೆಯೋ, ಇಲ್ಲವೋ ಎಂದು ವಿಚಾರಣೆಯ ಪೂರ್ವದಲ್ಲಿ ವಹಿಯನ್ನು ಪರೀಶಿಲಿಸಿದ್ದೀರಾ ಎಂದರೆ ಸಾಕ್ಷಿಯು ಆ ಸಂದರ್ಭದಲ್ಲಿ ಇದ್ದಂತಹ ಶಾಖೆ ಈಗ ಮುಚ್ಚಿ ದ್ದು, ದಾಖಲಾತಿಗಳು ಲಭ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ಶಾಖೆ ಮುಚ್ಚಿ ಸುಮಾರು 7-8 ವರ್ಷಗಳು ಆಗಿದ್ದು, ನಿಖರವಾದ ದಿನಾಂಕ ನೆನಪಿಲ್ಲ. ಪರಿಹಾರ ಅರ್ಜಿಯಲ್ಲಿ ಇದ್ದಂತಹ ಶಾಖೆ ಮುಚ್ಚಿ ದ ಸಂದರ್ಭದಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಹತ್ತಿರದ ಶಾಖೆಗೆ ವರ್ಗಾಯಿಸಲಾಗುತ್ತದೆ. ಆ ರೀತ ಪ್ರಸ್ತುತ ಅರ್ಜಿಗೆ ಸಂಬಂಧಪಟ್ಟ ದಾಖಲಾತಿಗಳು ವರ್ಗಾವಣೆಗೊಂಡಿದ್ದು, ನಾನು ಪರಿಶೀಲಿಸಿರುವುದಿಲ್ಲ. 2ನೇ ಎದುರುದಾರರಿಗೆ ವಾಹನಕ್ಕೆ ಸಂಬಂಧಪಟ್ಟ ಪಾಲಿಸಿ ನೀಡುವ ಸಂದರ್ಭದಲ್ಲಿ ಪರಿಹಾರ ಅರ್ಜಿಯಲ್ಲಿ ನಮೂದಿಸಿದ ವಿಳಾಸದಲ್ಲಿ ನಮ್ಮ ಕಂಪನಿಯ ಶಾಖೆ ಇತ್ತು. ಪ್ರಸ್ತುತ ಅರ್ಜಿ ದಾಖಲಿಸುವ ಸಂದರ್ಭದಲ್ಲಿ ನಮ್ಮ ಕಂಪನಿಯಲ್ಲಿ ನಿರ್ವಹಣೆ ಮಾಡುವ ವಹಿಯನ್ನು ಮತ್ತು ಪರಿಹಾರ ಅರ್ಜಿಯ ಆದೇಶದ ಪುಟವನ್ನು ಕಂಪನಿಯ ವತಿಯಿಂದ ಪರಿಶೀಲಿಸಿಲ್ಲ ಎಂದರೆ ಸಾಕ್ಷಿಯು ವಹಿಯನ್ನು

ಪರಿಶೀಲಿಸಿಲ್ಲ, ಆದರೆ ಆದೇಶಪುಟವನ್ನು ಪರಿಶೀಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಪ್ರಸ್ತುತ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ವಿಜಯ್ ಕುಮಾರ್ ಎಂಬುವವರು ಕಂಪನಿಯ ವ್ಯವಸ್ಥಾಪಕರಾಗಿದ್ದರು. ನಾನು ಅರ್ಜಿದಾರರ ಕಂಪನಿಗೆ ಸೇರಿದಾಗ ವಿಜಯ್ ಕುಮಾರ್ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ. ಈಗ ಕಂಪನಿಯಲ್ಲಿ ಇರುವ ವ್ಯವಸ್ಥಾಪಕರು ವಿಜಯ್ ಕುಮಾರ್ ರವರ ನಂತರ ಅಧಿಕಾರ ವಹಿಸಿಕೊಂಡಿದ್ದು, ವಿಚಾರಣೆ ನೀಡುವ ಪೂರ್ವದಲ್ಲಿ ಅವರೊದಿಂಗೆ ಚರ್ಚಿಸಿರುತ್ತೇನೆ. ಆ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಪ್ರಸ್ತುತ ಅರ್ಜಿಯಲ್ಲಿ ಸಾಕ್ಷ್ಯವನ್ನು ನೀಡುವ 10 ತಿಂಗಳ ಪೂರ್ವದಲ್ಲಿ ನಾನು ಅರ್ಜಿದಾರರ ಕಂಪನಿಗೆ ಸೇರಿರುತ್ತೇನೆ. ಎಂವಿಸಿ 6628/2010ರ ಅರ್ಜಿಯಲ್ಲಿನ ನೋಟೀಸು ನಮಗೆ ಜಾರಿಯಾದ ಬಗ್ಗೆ ಆದೇಶಪುಟದಲ್ಲಿ ನಮೂದು ಇದೆ ಎಂದರೆ ಸರಿ. ಸದರಿ ನೋಟೀಸು ನಮಗೆ ಜಾರಿಯಾದರೂ ನಾವು ಸೂಕ್ತ ರೀತಿಯಲ್ಲಿ ಪ್ರತಿನಿಧಿಸಿರವುದಿಲ್ಲ ಎಂದರೆ ಸಾಕ್ಷಿಯು ನೋಟೀಸು ಶಾಖೆಗೆ ಬಂದಿರುವುದಿಲ್ಲ, ಮಾರಾಟ ಕಛೇರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾವು ನೀಡುವ ಪಾಲಿಸಿಯಲ್ಲಿ ಕಂಪನಿಯ ಎರಡೂ ವಿಳಾಸಗಳನ್ನು ನಮೂದಿಸುತ್ತೇವೆ. 2ನೇ ಎದುರುದಾರರಿಗೆ ನೀಡಿರುವ ವಿಮೆಯನ್ನು ಪರಿಶೀಲಿಸಿರುತ್ತೇನೆ. ಮಾರಾಟ ಕಛೇರಿಗೆ ಬಂದಂತಹ ನೋಟೀಸನ್ನು ಶಾಖಾ ಕಛೇರಿಗೆ ನೀಡಬೇಕು ಎಂದರೆ ಸಾಕ್ಷಿಯು ಸಾಮಾನ್ಯವಾಗಿ ನೀಡುತ್ತಾರೆ, ಕೆಲವೊಮ್ಮೆ ಮಾತ್ರ ತಪ್ಪಿ ಹೋಗುತ್ತದೆ ಎಂದು ನುಡಿಯುತ್ತಾರೆ. ನಿಪಿ 3 ರಲ್ಲಿ ನಮೂದಿಸಿದ ವಿಳಾಸ 2ನೇ ಎದುರುದಾರರಿಗೆ ವಿಮೆ ನೀಡಿದ ಸಂದರ್ಭದಲ್ಲಿ ಇದ್ದು, ಇತರ ಯಾವುದೇ ಶಾಖೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ನಮೂದಿಸಿದ ಕಂಪನಿಯ ವಿಳಾಸಕ್ಕೆ ಪರಿಹಾರ ಅರ್ಜಿಯ ನೋಟೀಸು ಜಾರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನೊಂದಾಯಿತ ಕಛೇರಿಯ ವಿಳಾಸವೂ ಸಹ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಕಂಪನಿಯ ಪ್ಯಾನಲ್ ವಕೀಲರ ಪಟ್ಟಿ ಇದ್ದು, ಅವರುಗಳ ಪೈಕಿ ಸಾಕಷ್ಟು ವಕೀಲರ ಪರಿಚಯ ನನಗೆ ಇದೆ. ಅವರುಗಳ ಪೈಕಿ ಹೆಚ್.ಎಸ್.ಲಿಂಗರಾಜು ಎಂಬ ವಕೀಲರು ಮಾನ್ಯ ಉಚ್ಚ

ನ್ಯಾಯಾಲಯದಲ್ಲಿ ಕಂಪನಿಯ ಪ್ರಕರಣಗಳನ್ನು ಪ್ರತಿನಿಧಿಸುತ್ತಾರೆ ಎಂದರೆ ಸರಿ. ಸದರಿ ವಕೀಲರು 1ನೇ ಎದುರುದಾರರು ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಕಂಪನಿಯ ಪರ ಹಾಜರಾಗಿದ್ದರು ಎಂದರೆ ಸರಿ. 1ನೇ ಎದುರುದಾರರು ಸಲ್ಲಿಸಿದ್ದ ಅರ್ಜಿ ವಜಾ ಆಗಿದ್ದು, ಅದರ ವಿರುದ್ದ ಮೇಲ್ಮನವಿ ಸಲ್ಲಿಸಿದ್ದ ವಿಚಾರ ನನಗೆ ತಿಳಿದಿದೆ. ಮೇಲ್ಮನವಿಯಲ್ಲಿ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಶಾಖೆಗೆ ನೋಟೀಸು ನೀಡಲಾಗಿದೆ ಎಂದರೆ ಸಾಕ್ಷಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಮಗೆ ನೇರ ನೋಟೀಸು ನೀಡುವುದಿಲ್ಲ, ವಕೀಲರಿಗೆ ನೀಡುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನೋಟೀಸು ನೀಡಿದಲ್ಲಿ ನಮಗೆ ಮಾಹಿತಿ ದೊರೆಯುತ್ತದೆ ಎಂದರೆ ಸರಿ. ಮೇಲ್ಮನವಿಯಲ್ಲಿ ತೀರ್ಮಾನವಾದ ನಂತರ ಅಲ್ಲಿನ ವಕೀಲರು ನಮಗೆ ಮಾಹಿತಿ ನೀಡುತ್ತಾರೆ ಎಂದರೆ ಸರಿ. ಪ್ರಸ್ತುತ ಅರ್ಜಿಗೆ ಸಂಬಂಧಪಟ್ಟಂತೆ ಮೇಲ್ಮನವಿಯಲ್ಲಿ ಆದ ತೀರ್ಮಾನದ ಬಗ್ಗೆ ವಕೀಲರು ನಮಗೆ ಮಾಹಿತಿ ನೀಡಿರುತ್ತಾರೆ ಎಂದರೆ ಈ ಪ್ರಕರಣದಲ್ಲಿ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ ಹಾಗೂ ದಾಖಲಾತಿಗಯೂ ಸಹ ಇಲ್ಲ  ಎಂದು ನುಡಿಯುತ್ತಾರೆ. ನಾನು ಇತ್ತೀಚೆಗೆ ಕಂಪನಿಗೆ ಸೇರಿದ ಕಾರಣ ಆ ಬಗ್ಗೆ ದಾಖಲಾತಿಗಳನ್ನು ಪರಿ ಶೀಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆ ಬಗ್ಗೆ ದಾಖಲಾತಿಗಳು ಲಭ್ಯ ಇರಲಿಲ್ಲಎಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದಿಂದ ಪರಿಹಾರ ಅರ್ಜಿಯನ್ನು ಪುನರ್ ಸ್ಥಾಪನೆ ಮಾಡಿದಾಗ ನಮಗೆ ನ್ಯಾಯಾಲಯದಿಂದ ನೋಟೀಸು ನೀಡಲಾಗಿದ್ದು, ಅದು ಜಾರಿಯಾದ ಬಗ್ಗೆ ಆದೇಶ ಪುಟದಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ನಮೂದು ಇದೆ, ಆದರೆ ಆ ಸಂದರ್ಭದಲ್ಲಿ ಮೊದಲಿದ್ದ ಕಛೇರಿ ಮುಚ್ಚಲಾಗಿತ್ತು ಎಂದು ನುಡಿಯುತ್ತಾರೆ. ದಿನಾಂಕ 25.11.2020ಕ್ಕಿಂತ ಪೂರ್ವದಲ್ಲಿ ಎಲೆಕ್ಟ್ರಾನಿಕ್ ಸಿಟಯ ಕಛೇರಿ ಮುಚ್ಚಿ ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಸದರಿ ವಿಚಾರವನ್ನು ಪ್ರಮಾಣ ಪತ್ರದಲ್ಲಿಯೂ ತಿಳಿಸಿಲ್ಲ ಎಂದರೆ ಸರಿ. ನಮಗೆ ಜಾರಿ ಅರ್ಜಿಯಲ್ಲಿ ವಾರಂಟ್ ಜಾರಿ ಮಾಡಲು ಬಂದಾಗ ಮಾಹಿತಿ ತಿಳಿದು ಬಂದಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಜಾರಿ

ಅರ್ಜಿಯಲ್ಲಿ ಎಲೆಕ್ಟ್ರಾನಿಕ್ ಸಿಟಿಯ ವಿಳಾಸ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಶಾಖಾ ಕಛೇರಿಗೆ ವಾರಂಟ್ ಜಾರಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪರಿಹಾರದ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದಲೂ ನಮಗೆ ಮಾಹಿತಿ ಗೊತ್ತಿದ್ದರೂ ಸಹ ಉದ್ದೇಶಪೂರ್ಕವಾಗಿ ಹಾಜರಾಗಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**